ಮಾರ್ಗದರ್ಶನವನ್ನು ಈ ಸದನಕ್ಕೆ ಮತ್ತು ಸದಸ್ಯರಿಗೆ ತಾವು ನೀಡಬೇಕೆಂದು ಕೇಳಿಕೊಂಡು, ನನ್ನ ಮಾತನ್ನು ಮುಗಿಸುತ್ತೇನೆ.

3.00 ಪಿ.ಎಂ.

ಪ್ರಕಟಣೆ

ಅಧ್ಯಕ್ಷರು : ತಾವು ವ್ಯಕ್ತಪಡಿಸಿರತಕ್ಕಂಥ ಸದಭಿಪ್ರಾಯಗಳಿಗೆ ನಾನು ಅಭಾರಿಯಾಗಿದ್ದೇನೆ, ಧನ್ಯವಾದಗಳು. ದಿನಾಂಕ 26.02.1992ನೇ ಬುಧವಾರದಂದು ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆ ಸೇರಿ ಚರ್ಚಿಸಿ ಈ ಕೆಳಗೆ ಕಂಡಂಥ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಲಾಯಿತು. 27.02.1992 ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ ಮುಂದುವರಿಯುವುದು. 28ನೇ ತಾರೀಖು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ ಮುಂದುವರಿಯುವುದು ಮತ್ತು ಅವಕಾಶ ಸಿಕ್ಕಿದರೆ ಖಾಸಗಿ ಕಾರ್ಯಕಲಾಪ 29ರಂದು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರ. ಮಾರ್ಚಿ ತಿಂಗಳ ತಾರೀಖು 1 ಮತ್ತು 2 ರಜಾ ದಿನಗಳು, 3ನೇ ತಾರೀಖು ಬೆಳಿಗ್ಗೆ 11.00ಗಂಟೆಯಿಂದ 1.00ಗಂಟೆಯವರಿಗೆ ಸರ್ಕಾರಿ ಕಾರ್ಯಕಲಾಪ ಹಾಗೂ ಮಧ್ಯಾಹ್ನ 2.00 ಗಂಟೆಗೆ ಆಯವ್ಯಯದ ಮಂಡನೆ ಸದ್ಯಕ್ಕೆ ಇಷ್ಟನ್ನು ಸದನದ ಕಾರ್ಯಕಲಾಪಗಳ ಸಲಹಾ ಸಮಿತಿ ತೀರ್ಮಾನ ಮಾಡಿದೆ.

ಹಕ್ಕುಚ್ಯುತಿ ನಿರ್ಣಯ

ಸದನದಲ್ಲಿ ದೂರದರ್ಶನದವರಿಂದ ತಾರತಮ್ಯ

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ನಾನು ಒಂದು ಹಕ್ಕುಚ್ಯುತಿ ನಿರ್ಣಯವನ್ನು ತಮಗೆ ಕಳುಹಿಸಿದ್ದೇನೆ. ನಮಗಾದರೂ ಇಲ್ಲಿ ವರದಿ ಮಾಡುವ ವರದಿಗಾರರ ಮೇಲೆಯಾಗಲಿ ಅಥವಾ ವರದಿಯ ಸಂಬಂಧಪಟ್ಟವರ ಮೇಲೆಯಾಗಲಿ, ನಮ್ಮ ಭಾವನೆಗಳು ಇಲ್ಲ. ಇಲ್ಲಿ ಪ್ರಜಾಪ್ರಭುತ್ವದ ಪ್ರಶ್ನೆ ಇರುವುದು ಇಷ್ಟೆ. ಸಾಮಾನ್ಯವಾಗಿ ಪ್ರಜಾಪ್ರಭುತ್ವದಲ್ಲಿ ಈ ಪ್ರದರ್ಶನಗಳು ಇವೆಲ್ಲಾ ನಡೆದಾಗ ಗ್ಯಾಲರಿಯಲ್ಲಿ ಇರತಕ್ಕಂಥ ಜನರೂ ಸಹ ನೋಡುತ್ತಾರೆ, ಅದು ಪತ್ರಿಕೆಗಳಲ್ಲೂ ಕೂಡ ಬಂದಿರುತ್ತದೆ. ಇಲ್ಲಿ ಕುಳಿತಿರತಕ್ಕಂಥ ಪ್ರತಿಯೊಬ್ಬರ ಪ್ರಚಾರವೂ ಆಗಿರುತ್ತದೆ. ಆದರೆ ಸಾಮಾನ್ಯವಾಗಿ ಈ ದೂರದರ್ಶನ ಮಾಧ್ಯಮ ಮಾಡತಕ್ಕಂಥ ಒಂದು ರೀತಿ ನೀತಿ ಸರಿಯಿಲ್ಲ, ಇದರಿಂದ ನಿಜವಾಗಿ ನಮ್ಮ ಹಕ್ಕಿಗೆ ಧಕ್ಕೆಯಾಗಿದೆ ಎನ್ನುವ ಪ್ರಶ್ನೆ ಒಂದು. ಅದರ ಜೊತೆಗೆ ಈ ಸದನದ ವಿರೋಧ ಪಕ್ಷದ ನಾಯಕರಿಗೆ ಬಹಳ ಮಹತ್ತರವಾದ ಘನತೆ, ಗಾಂಭೀರ್ಯ, ಗೌರವವನ್ನು ನಾವು ಸಭೆಯಲ್ಲಿ ಕೊಡುತ್ತೇನೆ. ಒಂದು ಕಡೆ ಕೆಲವು ನಾಯಕರುಗಳನ್ನು ಮಾತ್ರ ಕ್ಯಾಮರದಲ್ಲಿ ತೋರಿಸತಕ್ಕಂಥದ್ದು, ಇನ್ನೊಂದು ಕಡೆ ವಿರೋಧಪಕ್ಷದ ನಾಯಕರನ್ನು ತೋರಿಸದೇ ಇರತಕ್ಕಂಥ ಅನೇಕ ದ್ವಂದ್ವಗಳ ಪರಿಸ್ಥಿತಿ ನಡೆಯುತ್ತಿದೆ. ಆದುದರಿಂದ ತಾವು ದಯವಿಟ್ಟು ಹಕ್ಕುಬಾಧ್ಯತೆ ಸಮಿತಿಗೆ ಕಳಿಸಿ ಸಂಬಂಧಪಟ್ಟವರನ್ನು ಕರೆಸಿ ಅವರಿಂದ ವಿವರವನ್ನು ಕೇಳಿ ಏನು ನಡೆದಿದೆ. ಎನ್ನತಕ್ಕಂಥಾದ್ದರ ಬಗ್ಗೆ ತಾವು ಚರ್ಚೆಗೆ ಒಂದು ಅವಕಾಶವನ್ನು ಮಾಡಿಕೊಡಬೇಕು. ನಾನು ಏಕೆ ಈ ಮಾತನ್ನು ಹೇಳುತ್ತೇನೆ ಎಂದರೆ, ನಾನು ಯಾರ ಮೇಲೂ ವೈಯಕ್ತಿಕವಾಗಿ

ದ್ವೇಷಕ್ಕೆ ಹೋಗುತ್ತಿಲ್ಲ. ಈ ಸದನದಲ್ಲಿ ವರದಿಗಾರರು ಬರುತ್ತಾರೆ, ಅವರ ಬಗ್ಗೆ ನಮಗೆ ಅಪಾರವಾದ ಗೌರವ ಇದೆ. ಅವರು ವರದಿಯನ್ನು ಕೊಡುವಾಗ ಬಹಳ ಪ್ರಾಮಾಣಿಕವಾಗಿ ವರದಿಯನ್ನು ಕೊಟ್ಟಿದ್ದಾರೆ. ಆದ್ದರಿಂದ ವರದಿಗಾರರ ಮೇಲೆ ನನ್ನ ಆಕ್ಷೇಪಣೆ ಇಲ್ಲ. ನಿರ್ಮಾಪಕರು ಎಂದು ನಾವು ಯಾರನ್ನೂ ಕರೆಯುತ್ತೇವೆ, ಅವರು ಈ ಟಿ.ವಿ. ಕ್ಯಾಮರದಲ್ಲಿ ತೆಗೆದುಕೊಂಡು ಹೋಗಿ ಯಾರನ್ನು ತೆಗೆಯಬೇಕು, ಯಾರನ್ನು ಬಿಡಬೇಕು ಎಂದು ಅಲ್ಲಿ ನಡೆಯತಕ್ಕಂಥಾದ್ದು ರಾಜಕೀಯ. ಯಾರ ಕೈ ಕತ್ತರಿಸಬೇಕು, ಯಾರ ತಲೆ ತೆಗೆಯಬೇಕು ಎನ್ನತಕ್ಕಂಥಾದ್ದು ಎಲ್ಲಾ ರಾಜಕೀಯದ ಕ್ಷೋಭೆ. ಆ ವ್ಯಕ್ತಿಗಳು ಇದರ ಬಗ್ಗೆ ಪ್ರಭಾವ ಬೀರುವುದರಿಂದ ದೂರದರ್ಶನದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಇತ್ತೀಚಿನ ದಿನಗಳಲ್ಲಿ ದೂರದರ್ಶನಗಳ ಮೇಲೆ ಕೆಟ್ಟ ಪರಿಣಾಮ ಬೀರತಕ್ಕಂಥದ್ದು ಆಗುತ್ತಿದೆ. ಇದರಿಂದ ನೇರ ಘಟನೆಗಳಾಗಿ ನಡೆಯುತ್ತಾ ಇದೆ. ಆದ್ದರಿಂದ ಇದೆಲ್ಲವನ್ನೂ ಸಮಗ್ರವಾಗಿ ಚಿಂತಿಸಿ, ಒಂದು ಚರ್ಚೆ ಮಾಡಿ, ಈ ನಿರ್ಣಯವನ್ನು ದಯವಿಟ್ಟು ತಪ್ಪು ಹಕ್ಕುಬಾಧ್ಯತೆ ಸಮಿತಿಗೆ ಕಳುಹಿಸಬೇಕು. ಇದನ್ನು ಕಳುಹಿಸುವುದರಿಂದ ಮುಂದೆ ಅವರು ಏನು ಹೇಳುತ್ತಾರೆ, ದೂರದರ್ಶನದವರು ಯಾರ ರೀತಿ ತಾವು ಮಾಡತಕ್ಕಂಥದ್ದು ಸರಿಯೆಂದು ಹೇಳುತ್ತಾರೋ ಅಥವಾ ಸರಿಯಿಲ್ಲವೆಂದು ವಿಷಾದ ವ್ಯಕ್ತಪಡಿಸುತ್ತಾರೋ, ಏನು ಮಾಡುತ್ತಾರೋ ನೋಡೋಣ. ಆದ್ದರಿಂದ ಇನ್ನು ಮುಂದೆ ಇದು ಬದಲಾವಣೆಯಾಗಬೇಕಾಗಿದೆ. ಇಲ್ಲದಿದ್ದರೆ ಅತ್ಯಂತ ನೋವಿನಿಂದ ಇದನ್ನು ನಾವು ಸ್ವೀಕಾರ ಮಾಡಬೇಕಾಗುತ್ತದೆ. ತಾವು ದಯವಿಟ್ಟು ಈ ನಿರ್ಣಯವನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸಬೇಕೆಂದು ತಮ್ಮಲ್ಲಿ ಅತ್ಯಂತ ಪ್ರಾಮಾಣಿಕವಾಗಿ ಒತ್ತಾಯ ಮಾಡುತ್ತೇನೆ.

+ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೆ, ಈ ಒಂದು ಹಕ್ಕುಬಾಧ್ಯತಾ ನಿರ್ಣಯವನ್ನು ನಾನು ಮತ್ತು ಸ್ನೇಹಿತರಾದ ವಾಟಾಳ್ ನಾಗರಾಜ್‌ರವರು ಇಬ್ಬರೂ ಸೇರಿ ಕಳುಹಿಸಿದ್ದೇವೆ. ಇದು ಮೊನ್ನೆ ನಡೆದಿರತಕ್ಕ ಘಟನೆ. ಪ್ರಾಮಾಣಿಕವಾಗಿ ಇದ್ದರೆ ನಾವು ಈ ತರಹದ ನಿರ್ಣಯವನ್ನು ಕಳುಹಿಸುತ್ತಿರಲಿಲ್ಲ, ಕಳುಹಿಸುವುದಕ್ಕೆ ನಾವು ಪ್ರಯತ್ನ ಪಡುತ್ತಲೂ ಇರಲಿಲ್ಲ. ಅನೇಕ ಸಂದರ್ಭಗಳಲ್ಲಿ, ಅವರು ಸುದ್ದಿ ಪ್ರಸಾರ ಮಾಡತಕ್ಕಂಥ ಸಂದರ್ಭದಲ್ಲಿ, ಮತ್ತೆ ಈ ಸದನದಲ್ಲಿ ನಡೆಯತಕ್ಕಂಥ ಇಂದಿನ ಕಾರ್ಯಕ್ರಮದಲ್ಲಿ 'ವಿಧಾನ ಮಂಡಲದಲ್ಲಿ ಇಂದು' ಎನ್ನತಕ್ಕಂಥ ಕಾರ್ಯಕ್ರಮ ಇದೆ. ಆ ಕಾರ್ಯಕ್ರಮವನ್ನು ಪ್ರಸಾರ ಮಾಡುವಾಗ ಉದ್ದೇಶಪೂರ್ವಕವಾಗಿ ಕೆಲವರು ಈ ರೀತಿಯ ವಿಷಯ ಮಾತನಾಡತಕ್ಕಂಥದನ್ನು ಪ್ರಸ್ತಾಪ ಮಾಡುವುದಿಲ್ಲ, ಹೆಸರನ್ನೂ ಕೂಡ ಪ್ರಸ್ತಾಪ ಮಾಡುವುದಿಲ್ಲ. ಇದು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ.

ನಾನು ಕೂಡ ಅನೇಕ ಸಂದರ್ಭಗಳಲ್ಲಿ ಅವಕಾಶ ಸಿಕ್ಕಿದಾಗ ಸುದ್ದಿ ನೋಡಿದ್ದೇನೆ, ವಿಮರ್ಶೆ ನೋಡಿದ್ದೇನೆ. ಉದ್ದೇಶಪೂರ್ವಕವಾಗಿ ನಮ್ಮ ಕೆಲವು ಹೆಸರುಗಳನ್ನು ಬಿಡುತ್ತಾರೆಂಬ ಭಾವನೆ ಬಂದಿದೆ. ಅದಕ್ಕೋಸ್ಕರ, ಇದು ಮೊದಲ ಸಾರಿ ಆಗಿದ್ದರೆ ನಾನು ಹಕ್ಕುಚ್ಯುತಿ ನೋಟೀಸ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿರಲಿಲ್ಲ, ಆದರೆ ಇದು ಹಿಂದಿನಿಂದ ನಡೆದುಕೊಂಡು ಬಂದಿದೆ. ಆಕಾಶವಾಣಿಯಲ್ಲಿ ಸಹ ಇದೇ ರೀತಿ ನಡೆಯುತ್ತಿದೆ. ತಾವು ಇದನ್ನು ತೀವ್ರವಾಗಿ ಪರಿಗಣಿಸಬೇಕು. ಹಕ್ಕುಬಾಧ್ಯತಾ ಸಮಿತಿ ಏನಿದೆ ಅದಕ್ಕೆ ನೇರವಾಗಿ ತಾವು ಇದನ್ನು ಕಳುಹಿಸಿ ಸಮರ್ಪಕವಾಗಿ ವಿವರಣೆ ಪಡೆದು ಇನ್ನು ಮುಂದು ಈ ರೀತಿ ಆಗದಂತೆ ಅವರಿಗೆ ಎಚ್ಚರಿಕೆ ಕೊಡಬೇಕಾಗಿದೆ. ತಾವು ಅವಕಾಶ ಕೊಟ್ಟರೆ

ಅವರು ಇಲ್ಲಿ ಬರುತ್ತಾರೆ, ಇಲ್ಲದಿದ್ದರೆ ಬರುವುದಿಲ್ಲ. ಅದು ಕೇಂದ್ರ ಸರ್ಕಾರದ ಅಧೀನಕ್ಕೆ ಒಳಪಡತಕ್ಕ ಸಂಸ್ಥೆ ಎಂಬುದು ಇಲ್ಲಿ ಇಲ್ಲ. ಇಲ್ಲಿ ನಡೆಯತಕ್ಕದ್ದನ್ನು ಆಬ್ಜಕ್ಟೀವ್ ಆಗಿ ಅವರು ರಿಪೋರ್ಟ್ ಮಾಡಬೇಕಾಗಿರುತ್ತದೆ. ಅದನ್ನು ತಪ್ಪಾಗಿ ಮಾಡಿದ್ದರೆ ಎಚ್ಚರಿಕೆ ಕೊಡಬೇಕಾದ ಅವಶ್ಯಕತೆ ಇದೆ. ಆದುದರಿಂದ ತಾವು ಇದನ್ನು ತೀವ್ರವಾಗಿ ಪರಿಶೀಲಿಸಬೇಕೆಂದು ತಮ್ಮ ಗಮನಕ್ಕೆ ತಂದಿದ್ದೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ದೂರದರ್ಶನದವರು ವರದಿ ಕೊಡುವುದರ ಬಗ್ಗೆ ಹಿಂದೆ ಇದೇ ರೀತಿಯಲ್ಲಿ ಪ್ರಸ್ತಾಪ ಮಾಡಿದ್ದೆವು. ಇಲ್ಲಿ ಬರತಕ್ಕ ವರದಿಗಾರರು ಎಲ್ಲಾ ವಿಚಾರಗಳನ್ನು ತೆಗೆದುಕೊಂಡು ಹೋಗಿ ತಿಳಿಸುತ್ತಾರೆ. ಅವರು ಇಲ್ಲಿಂದ ದೂರವಾಣಿ ಮೂಲಕ ತಿಳಿಸುತ್ತಾರೆ. ಆದರೆ ಅಲ್ಲಿ ಅವರು ಎಡಿಟ್ ಮಾಡುವುದರಲ್ಲಿ ತಾರತಮ್ಯ ಕಾಣುತ್ತಿದೆ. ಪ್ರಜಾಪ್ರಭುತ್ವ ಪದ್ಧತಿಯಲ್ಲಿ, ಈ ಸಭೆಯಲ್ಲಿ ಏನು ನಡೆಯುತ್ತದೆ. ಇಲ್ಲಿ ಸರ್ಕಾರ ಏನು ಮಾಡುತ್ತದೆಂದು ಹೇಳುವುದು ಮುಖ್ಯ. ಆದರೆ ಸರ್ಕಾರ ಮಾಡತಕ್ಕ ತಪ್ಪುಗಳ ಬಗ್ಗೆ ವಿರೋಧ ಪಕ್ಷದಲ್ಲಿ ಕುಳಿತು ನಾವು ಮಾತನಾಡದೆ ಹೋದರೆ ಅದು ತಪ್ಪಾಗುತ್ತದೆ. ಇಲ್ಲಿ ನಾವು ಅನೇಕ ಸಂದರ್ಭಗಳಲ್ಲಿ ಪ್ರಸ್ತಾಪ ಮಾಡಿರುತ್ತೇವೆ. ಅದು ದೂರ್ದರ್ಶನದಲ್ಲಿ ಬರುವುದಿಲ್ಲ. ಉದಾಹರಣೆಗೆ ರಾಜ್ಯಪಾಲರ ಭಾಷಣದ ಸಂದರ್ಭ. ಇಡೀ ರಾಜ್ಯದ ಜನತೆ ದೂರದರ್ಶನವನ್ನು ನೋಡುತ್ತಾರೆ. ಅದನ್ನು ನೋಡಿದಾಗ ವಿರೋಧ ಪಕ್ಷದ ನಾಯಕರು ಬರಲಿಲ್ಲವೇನೋ ಎಂಬ ರೀತಿಯಲ್ಲಿ ಭಾಸವಾಗುತ್ತದೆ ನಾನು ಹೇಳತಕ್ಕದ್ದು ನೇರವಾಗಿ ರಾಜ್ಯ ಸರ್ಕಾರಕ್ಕೆ ಸಂಬಂಧಪಡದೆ ಇರತಕ್ಕ ವಿಷಯ ಎಂದು ಗೊತ್ತಿದೆ. ಆದ್ದರಿಂದ ನಾನು ವಿನಂತಿಸುವುದು ಏನೆಂದರೆ ಇದನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸಿ ಆ ಸಮಿತಿಯಲ್ಲಿ ಕುಳಿತುಕೊಂಡು ವಿಚಾರ ಮಾಡಿ ಯಾವುದಾದರೂ ಒಂದು ಸ್ಪಷ್ಟವಾದ ತೀರ್ಮಾನವನ್ನು ಇವರ ಬಗ್ಗೆ ಹೇಳಬೇಕಾಗುತ್ತದೆ. ಇದೇ ರೀತಿ ಮಾಡಿಕೊಂಡು ಹೋದರೆ ಆಗುವುದಿಲ್ಲ. ಇಲ್ಲಿ ಚರ್ಚೆ ಮಾಡತಕ್ಕದ್ದು, ಪ್ರಸ್ತಾಪ ಮಾಡತಕ್ಕದ್ದು ವೈಯಕ್ತಿಕವಾದ ವಿಚಾರಗಳೇನಲ್ಲ. ಅವುಗಳಿಗೆ ಜನರು ಪ್ರತಿಬಿಂಬಿಸುತ್ತಾರೆ. ಆ ಬಗ್ಗೆ ವಿಚಾರ ಮಾಡುವುದಿಲ್ಲವೆಂದರೆ ಯಾರದ್ದೂ ಹಿಡಿತ ಇಲ್ಲವೆಂಬ ಭಾವನೆ ಬರುತ್ತದೆ. ಇದರಿಂದ ಸದನಕ್ಕೆ ಅಪಚಾರ ಮಾಡುವುದರ ಜೊತೆಗೆ ದೂರದರ್ಶನದ ವ್ಯವಸ್ಥೆಯ ಬಗ್ಗೆ ನಂಬಿಕೆ ಹೋಗತಕ್ಕ ಪರಿಸ್ಥಿತಿ ಬರಬಹುದು. ಆ ಕಾರಣದಿಂದ ಇದನ್ನು ಹಕ್ಕುಬಾದ್ಯತಾ ಸಮಿತಿಗೆ ಕಳುಹಿಸಿಕೊಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

+ SRI QUMURAL ISLAM (Gulbarga) : As you all know, T.V. is an important media which reflects the functioning of both the houses of Legislature. We are all representatives of people. We are expressing the grievances of people. It is good that reporters who are deputed will cover the proceedings of both the Houses. We feel it and that is our personal opinion. Whatever that appears in the T.V., should justify all the members here particularly the opposition leaders belonging to different parties. Hence I request you kindly to refer the matter to the privileges committee.

ಅಧ್ಯಕ್ಷರು : ಈಗ ಆ ಸೂಚನೆ ನನ್ನ ಮುಂದೆ ಇದೆ, ಅದನ್ನು ಪರಿಶೀಲನೆ ಮಾಡಿ ಮತ್ತೆ ನಾನು ಸಭೆಗೆ ಈ ವಿಚಾರದಲ್ಲಿ ಏನು ಮಾಡುತ್ತೇನೆಂದು ರಿಪೋರ್ಟ್ ಮಾಡುತ್ತೇನೆ.